ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.
ಸಿ.ಸಿ. ನಂ.: 1332/2022

..................................................................

CW 09
PW 07

| | | |
|---|---|---|
| ಹೆಸರು | ಃ | ನಿರ್ಮಲಾ |
| ಗಂಡನ ಹೆಸರು | ಃ | ಸಿದ್ದಪ್ಪಾ ಸುಂಕದ |
| ವಯಸ್ಸು | ಃ | 52 ವರ್ಷ |
| ಉದ್ಯೋಗ | ಃ | ಮನೆಕೆಲಸ |
| ವಾಸಸ್ಥಳ | ಃ | ಶಿರೂರು, ನವಲಗುಂದ ತಾಲೂಕು |

ದಿನಾಂಕ 15-10-2025 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ಚಾಸಾ 1 ಮತ್ತು 4 ನನಗೆ ಪರಿಚಯ. ಚಾಸಾ 2 ಮತ್ತು 3,ಚಾಸಾ 5 ರಿಂದ 8, ಚಾಸಾ 11 ರವರ ಪರಿಚಯ ಇಲ್ಲ. ಚಾಸಾ 4 ರವರು ಮರಣ ಹೊಂದಿದ್ದಾರೆ. ಚಾಸಾ 10 ನನ್ನ ತಮ್ಮ. ಮೃತ ಸಿದ್ದಾಪ್ಪಾ ಚೆನ್ನಪ್ಪಾ ಸುಂಕದ ನನಗೆ ಗಂಡನಾಗಬೇಕು ಇವರು ಸುಮಾರು 3 ವರ್ಷಗಳ ಹಿಂದೆ ಹಳಿಯಾಳ ನಾಕಾ ಹತ್ತಿರ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ಅಪಘಾತ ಆಗಿ ಮರಣ ಹೂಂದಿದರು. ಅಪಘಾತ ಹೇಗೆ ಆಯಿತು ಎಂದು ನನಗೆ ಗೊತ್ತಿಲ್ಲ. ಗರಗದ ಶಿವಪ್ಪಾ ನನಗೆ ಅಪಘಾತವಾದ ಬಗ್ಗೆ ಹೇಳಿದ ನಂತರ ಹಳಿಯಾಳದ ಸರ್ಕಾರಿ ಆಸ್ಪತ್ರೆಗೆ ಬಂದು ನೋಡಿದಾಗ ಅವರ ತಲೆಗೆ ತೀವ್ರ ತರಹದ ಗಾಯವಾಗಿ ಮರಣ ಹೊಂದಿದ್ದರು. ಸಿದ್ದಾಪ್ಪಾ ಚೆನ್ನಪ್ಪಾ ಸುಂಕದ ರವರು ಹಳಿಯಾಳದಲ್ಲೇ ವಾಸವಿದ್ದರು. ಈ ವಿಚಾರವಾಗಿ ಪೋಲಿಸರು ನನ್ನು ವಿಚಾರಣೆ ಮಾಡಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 18-12-2021 ರಂದು ನೀವು ಪೋಲಿಸರಿಗೆ ಹೇಳಿಕೆ ನೀಡಿದ್ದು ಅದರಲ್ಲಿ ನೀವು ದಿನಾಂಕ 17-12-2021 ರಂದು ರಾತ್ರಿ 10 ಗಂಟೆಗೆ ಅಪಘಾತವಾಗಿದೆ ಎಂದು ಚಾಸಾ 1 ರವರು ಪೋನ ಮಾಡಿ ನಿಮಗೆ ತಿಳಿಸಿ ನಿಮ್ಮ ಗಂಡ ಸಿದ್ದಪ್ಪ ರವರಿಗೆ ಮೋಟಾರ ಸೈಕಲ್ ಮೇಲೆ ಹಿಂಬದಿ ಕುಳಿತು ಹೋಗುವಾಗ ಅಪಘಾತವಾಗಿ ತಲೆಗೆ ಗಾಯವಾಗಿದ್ದರಿಂದ ಮೃತ ಪಟ್ಟಿರುತ್ತಾನೆಂದು ತಿಳಿಸಿ, ಹಳಿಯಾಳ ಸರ್ಕಾರಿ ಆಸ್ಪತ್ರೆ ಶವಾಗಾರದಲ್ಲಿ ಮೃತ ದೇಹ ಇರುತ್ತದೆ ಎಂದು ತಿಳಿಸಿದರು ಎಂದು ನುಡಿದಿರುತ್ತೀರಿ ಎಂದರೆ ಸರಿ. ಸಾಕ್ಷಿಗೆ ದಿನಾಂಕ 18-12-2021 ರಂದು ನೀಡಿದ ಹೇಳಿಕೆಯಲ್ಲಿ ಹೀಗಿರುತ್ತಾ ......... ಈಗ ನನಗೆ ಗೊತ್ತಾಯಿತು ಎಂದು ನುಡಿದಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿ ತಮ್ಮ ಹೇಳಿಕೆಯನ್ನು ಅಲ್ಲಗಳೆದ್ದಿದ್ದರಿಂದ ಅದನ್ನು ನಿಪಿ 9 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು</u>** : ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎನ್ನುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ )

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.